

# ನಿಸ್ವಾರ್ಥದ ಫಲ

■ ಉಮಾ ಅಣ್ಣಿಗೇರಿ, ಹುಬ್ಬಳ್ಳಿ

ಒಬ್ಬ ಬಡ ಯುವಕನಿದ್ದ. ಬೆಳಗಿನಿಂದ ಸಂಜೆಯವರೆಗೆ ದುಡಿದರೂ ಅದು ಅವನ ದಿನದ ಎರಡು ಹೊತ್ತಿನ ಊಟಕ್ಕೆ ಖರ್ಚಾಗಿ ಬಿಡುತ್ತಿತ್ತು. ಪ್ರತಿದಿನ ರಾತ್ರಿ ಎರಡು ರೊಟ್ಟಿಗಳನ್ನು ಜಾಸ್ತಿ ಮಾಡಿಟ್ಟುಕೊಂಡು, ಬೆಳಿಗ್ಗೆ ಅದನ್ನೇ ತಿಂದು ಕೆಲಸಕ್ಕೆ ಹೋಗುತ್ತಿದ್ದ. ಒಮ್ಮೆ ಬೆಳಿಗ್ಗೆ ಎದ್ದು ನೋಡಿದಾಗ ರೊಟ್ಟಿ ಇರಲಿಲ್ಲ. ಮಾರನೆ ದಿನವೂ ಹಾಗೆಯೇ ಆಯಿತು. ಹಸಿವಿನಿಂದಲೆ ಕೆಲಸಕ್ಕೆ ಹೋಗುವಂತಾಯಿತು. ಈ ದಿನ ರಾತ್ರಿಯಿಡೀ ಎಚ್ಚರವಿದ್ದಾದರೂ ಸರಿ ರೊಟ್ಟಿ ಕಳ್ಳನನ್ನು ಹಿಡಿಯಲೇ ಬೇಕೆಂದುಕೊಂಡ. ನಡು ರಾತ್ರಿ ಏನೋ ಶಬ್ದವಾಯಿತು. ಹೋಗಿ ನೋಡಿದಾಗ ಇಲಿಯೊಂದು ರೊಟ್ಟಿ ತಿನ್ನತೊಡಗಿತ್ತು. ಸಿಟ್ಟಿನಿಂದ ಇಲಿಯನ್ನು ಹಿಡಿದವನೇ, 'ನಾನು ದಿನಾಲೂ ಕಷ್ಟ ಪಟ್ಟು ದುಡಿದು ರೊಟ್ಟಿ ಮಾಡಿಟ್ಟುಕೊಂಡರೆ, ನೀನು ಅದನ್ನು ತಿಂದು ನನ್ನನ್ನು ಹಸಿವಿನಿಂದ ಬಳಲುವಂತೆ ಮಾಡುತ್ತಿದ್ದೀಯ. ನಿನ್ನನ್ನು ಸಾಯಿಸಿ ಬಿಡುತ್ತೇನೆ' ಎಂದನು.

ಆಗ ಇಲಿ 'ನನ್ನ ಕ್ಷಮಿಸು. ನನಗೂ ಹಸಿವಾಗಿತ್ತು ತಿಂದಿದ್ದೇನೆ. ನಿನ್ನ ಕಷ್ಟ ದೂರವಾಗಲು ನಾನೊಂದು ಉಪಾಯ ಹೇಳುತ್ತೇನೆ' ಎಂದಿತು. ಸರಿ, ಅದೇನು ಹೇಳುತ್ತೀಯೋ ಹೇಳು ಎಂದಾಗ ಇಲಿ, 'ನೀನು ಗೌತಮ ಬುದ್ಧನ ಬಳಿ ಹೋಗಿ ನಿನ್ನ ಕಷ್ಟ ನಿವಾರಣೆಗಾಗಿ ಏನು ಮಾಡಬೇಕೆಂದು ಕೇಳು. ಅವರು ಖಂಡಿತ ಪರಿಹಾರ ಸೂಚಿಸುತ್ತಾರೆ' ಎಂದಿತು. ಯುವಕ ಬುದ್ಧನ ಬಗ್ಗೆ ಬಹಳ ಕೇಳಿದ್ದ. ಅದೇ ಸರಿ, ಹಾಗೇ ಮಾಡುವೆ ಎಂದು ಹೇಳುತ್ತ ಇಲಿಯನ್ನು ಬಿಟ್ಟ. ಮರು ದಿನ ಬೆಳಿಗ್ಗೆ ಬುದ್ಧನನ್ನು ಕಾಣಲು ಹೊರಟೇ ಬಿಟ್ಟ.

ಹೋಗುತ್ತಾ ದಾರಿಯಲ್ಲಿ ಕತ್ತಲಾಯಿತು. ಒಂದು ಮನೆಯ ಬಾಗಿಲು ತಟ್ಟಿದ. ಮನೆ